**ಸಾಕ್ಷಿಯನ್ನು ದಿಃ 19.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಸಿ.ವಿ.ಎಸ್ ವಕೀಲರಿಂದಃ-**

ನಾನು ಬಿ.ಎ ಪದವೀಧರ. ನಾನು ನಿವೃತ್ತ ಸರ್ವೇಯರ್ ಈಗ ವ್ಯವಸಾಯ ಮಾಡಿಕೊಂಡಿದ್ದೇನೆ. ನಾನು ವಿರಾಜಪೇಟೆ ಮತ್ತ ದೇವನಹಳ್ಳಿಯಲ್ಲಿ ಸರ್ವೇಯರ್ ಆಗಿ ಕೆಲಸ ಮಾಡಿದ್ದೇನೆ. 2005 ನೇ ಸಾಲಿನಲ್ಲಿ ನಿವೃತ್ತಿ ಹೊಂದಿರುತ್ತೇನೆ. ವಾದಿ ಏನು ಕೇಸ್ ಹಾಕಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ನನಗೆ ಮೂವರು ಹೆಣ್ಣು ಮಕ್ಕಳು ಒಬ್ಬ ಗಂಡು ಮಗ. ಅವರುಗಳೆಂದರೆ ಮಮತಾ, ಕವಿತ, ಹರೀಶ್ ಮತ್ತು ಸವಿತ ಆಗಿರುತ್ತಾರೆ. ನನ್ನ ಲಿಖಿತ ತಕರಾರಿನಲ್ಲಿ ಏನು ವಿಚಾರ ಬರೆದಿದೆ ಎಂದು ತಿಳಿದುಕೊಂಡಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನಾನು ತಿಳಿದುಕೊಂಡಿದ್ದೇನೆ. ಇಂಗ್ಲೀಷ್ ಭಾಷೆಯನ್ನು ಓದಿದರೆ ಪೂರ್ಣವಾಗಿ ಅರ್ಥವಾಗುವುದಿಲ್ಲ. ಅದನ್ನು ಕನ್ನಡದಲ್ಲಿ ಯಾರಾದರೂ ಓದಿ ಹೇಳಿದರೆ ಅರ್ಥ ಮಾಡಿಕೊಳ್ಳುತ್ತೇನೆ ಎನ್ನುತ್ತಾರೆ.

ಈ ಕೇಸ್ ನ ವಾದಿ ತಾನ್ವಿಗೌಡ ನನ್ನ ಮೊಮ್ಮಗಳು. ಅವರ ತಾಯಿ ದೀಪಿಕಾ ರವರು ವಾದಿಯನ್ನು ಪ್ರತಿನಿಧಿಸುತ್ತಾರೆ. ವಾದಿ ತಾನ್ವಿ ಗೌಡ ನನ್ನ ಮಗ ಹರೀಶ್ ಮತ್ತು ದೀಪಿಕಾ ರವರಿಗೆ ಜನಿಸಿದ ಮಗು ಎಂದರೆ ಸರಿ. ವಾದಿಯನ್ನು ಪ್ರತಿನಿಧಿಸಲು ಯಾವುದೆ ಅರ್ಜಿ ಸಲ್ಲಿಸದೆ ದಾವೆ ಹಾಕಿದ್ದಾರೆ ಎಂದು ನನ್ನ ಲಿಖತ ತಕರಾರಿನಲ್ಲಿ ಹೇಳಿರುವುದು ನನ್ನ ಗಮನಕ್ಕೆ ಇಲ್ಲ. ನಾನು ಸರ್ವೇಯರ್ ಆದಾಗಿನಿಂದಲೂ ತೆರಿಗೆ ಪಾವತಿ ಮಾಡಿಲ್ಲ. ತೆರಿಗೆ ಪಾವತಿ ಮಾಡುವಷ್ಟು ಆದಾಯ ಇರಲಿಲ್ಲ. ನಾನು ಸರ್ಕಾರಿ ನೌಕರ ಇದ್ದಕಾರಣ ಯಾವುದೆ ಆಸ್ತಿಯನ್ನು ತೆಗೆದುಕೊಳ್ಳಬೇಕಾದರೆ ಅನುಮತಿ ಪಡೆದುಕೊಳ್ಳಬೇಕಿತ್ತು ಎಂದರೆ ಸರಿ. ನನ್ನ ಮಕ್ಕಳ ಪೈಕಿ ದೊಡ್ಡ ಮಗಳು ಮಮತ, 2 ನೇಯವರು ಕವಿತ, 3 ನೇಯವರು ಸವಿತ ಕೊನೆಯವರು ಹರೀಶ್ ಆಗಿರುತ್ತಾರೆ.

1996 ರಿಂದ 3 ವರ್ಷಗಳ ಅಂತರದಲ್ಲಿ ನನ್ನ ಮಕ್ಕಳ ಮದುವೆ ಮಾಡಿರುತ್ತೇನೆ. ನನ್ನ ನಿವೃತ್ತಿ ಆಗುವ ಸಮಯಕ್ಕೆ ನಿವ್ವಳ ಸಂಬಳ 7500/- ಇತ್ತು. ವೇತನದಿಂದ ಹಾಗೂ ಜಮೀನಿನಿಂದ ಬಂದ ಆದಾಯದಿಂದ ಮಕ್ಕಳ ಮದುವೆ ಮಾಡಿರುತ್ತೇನೆ. ದಾವಾ ಸ್ವತ್ತುಗಳ ಚಕ್ಕುಬಂದಿ ಸರಿ ಇಲ್ಲ ಎಂದು ಲಿಖಿತ ತಕರಾರಿನಲ್ಲಿ ಮತ್ತು

ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿದ್ದು, ಸರಿಯಾದ ಚಕ್ಕುಬಂದಿಯನ್ನು ನಮೂದು ಮಾಡಿದ್ದಿರಾ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳೆಲ್ಲಾ ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರ್ವೆ.ನಂ. 107/4 ಮತ್ತು 108/4 ಸ್ವಯಾರ್ಜಿತ ಆಸ್ತಿಗಳು ಎನ್ನುತ್ತಾರೆ. ಐಟಂ ನಂ.1 ಮತ್ತು 2 ಅನ್ನು ನನ್ನ ಸಂಬಳದ ಹಣದಿಂದ ಉಳಿಸಿ 1999 ರಲ್ಲಿ ಖರೀದಿ ಮಾಡಿರುತ್ತೇನೆ. ಸಾಕ್ಷಿ ಪುನಃ ಯಾವಾಗ ಖರೀದಿ ಮಾಡಿರುತ್ತೇನೆ ಎಂದು ಮರೆತಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಸಂಬಳದಲ್ಲಿ ಉಳಿತಾಯ ಮಾಡಿದ ಬಗ್ಗೆ ಯಾವುದೆ ದಾಖಲೆ ಇಟ್ಟುಕೊಂಡಿಲ್ಲ. ದಾವಾ ಐಟಂ ನಂ. 1 ಮತ್ತು 2 ರ ಸ್ವತ್ತನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ನಾರಾಯಣೇಗೌಡ, ಕೃಷ್ಣೇಗೌಡ, ರಾಮೇಗೌಡ ಮತ್ತು ಚಂದ್ರೇಗೌಡ ಎಂಬುವವರಿಂದ ಖರೀದಿ ಮಾಡಿರುತ್ತೇನೆ. ದಾವಾ ಐಟಂ ಸ್ವತ್ತುಗಳಲ್ಲಿ ನಾವು ಎಲ್ಲರೂ ಅಂದರೆ ನಾನು, ಹೆಣ್ಣು ಮಕ್ಕಳು ಮತ್ತು ಮಗ ಎಲ್ಲರೂ ಸೇರಿ ಐಟಂ ನಂ. 1 ಮತ್ತು 2 ಅನ್ನು 2022 ನೇ ಸಾಲಿನಲ್ಲಿ ಮಾರಾಟ ಮಾಡಿರುತ್ತೇವೆ. ಮಕ್ಕಳ ಪೈಕಿ ಸವಿತ ಎಂಬುವವರ ಪೌತಿ ಆಗಿರುತ್ತಾರೆ. ಅಕೆಗೆ ಒಬ್ಬಳು ಮಗಳು ಇರುತ್ತಾಳೆ, ಆಕೆ ಮಾರಾಟ ಮಾಡುವುವಾಗ ಸೇರಿರುವುದಿಲ್ಲ. ನಾನು ನನ್ನ ಮೊಮ್ಮಗಳನ್ನು ಕ್ರಯ ಪತ್ರಕ್ಕೆ ಸೇರಿಸದೆ ಬೇರೆ ಮಕ್ಕಳೊಂದಿಗೆ ಸೇರಿ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಅದು ನನ್ನ ಸ್ವಂತ ಆಸ್ತಿ ಆದರೆ ನಾನೊಬ್ಬನೆ ಕ್ರಯಕ್ಕೆ ಕೊಡುತ್ತಿದ್ದೆ ಎಂದರೆ ಸರಿ, ಈಗಲೂ ಅದು ನನ್ನ ಸ್ವಂತ ಆಸ್ತಿ ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.